ಸುಮಾರು 30 ಎಕರೆ ಜಮೀನಿಗೆ ಮಾತ್ರ ನೀರು ಒದಗಿಸಲಾಗುತ್ತಿದೆ.

ಇ) ಬಂದಿದೆ.

ಈ) ಈ ಏತ ನೀರಾವರಿ ಯೋಜನೆಯನ್ನು ಈ ಹಿಂದೆ ಪಾಣೆ ಮಂಗಳೂರು ರೈತರ ಸೇವಾ ಸಹಕಾರಿ ಸಂಘದಿಂದ ನಿರ್ವಹಿಸಲ್ಪಡುತ್ತಿದ್ದು, ಸದರಿ ಸಂಘವು ಆರ್ಥಿಕ ಮುಗ್ಗಟ್ಟಿನಿಂದ ಈ ಯೋಜನೆಯನ್ನು ಸಮರ್ಪಕವಾಗಿ ನಿರ್ವಹಿಸಲು ಸಾಧ್ಯವಾಗದಿದ್ದುದರಿಂದ ಈ ಏತ ನೀರಾವರಿ ಯೋಜನೆಯನ್ನು 4: 98ರಲ್ಲಿ ಸಣ್ಣ ನೀರಾವರಿ ಇಲಾಖೆಗೆ ಹಸ್ತಾಂತರಗೊಂಡಿದ್ದು, ಈ ಯೋಜನೆಯ ದುರಸ್ತಿಗಾಗಿ 1998-99ನೇ ಸಾಲಿನ ಆಯವ್ಯಯದಲ್ಲಿ 10.00 ಲಕ್ಷ ರೂ.ಗಳ ಅಂದಾಜು ಮೊತ್ತ ಹಾಗೂ 3.00 ಲಕ್ಷ ರೂ.ಗಳ ಅನುದಾನದೊಂದಿಗೆ ಸೇರಿಸಲಾಗಿದ್ದು ದುರಸ್ತಿ ಕಾರ್ಯವನ್ನು ಶೀಘ್ರವಾಗಿ ಕೈಗೊಳ್ಳಲಾಗುವುದು.

ವಿಷಯ: ಬೆಂಗಳೂರು ರಿಚ್ಮಂಡ್ ವೃತ್ತಕ್ಕೆ ಮೇಲು ಸೇತುವೆ ಮಂಜೂರು ಮಾಡುವುದು.

907 (559)

ಶ್ರೀ ರಾಮಲಿಂಗಾರೆಡ್ಡಿ (ಜಯನಗರ): ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ರಿಚ್ಮಂಡ್ ವೃತ್ತಕ್ಕೆ ಮೇಲು ಸೇತುವೆ ಮಂಜೂರಾಗಿದೆಯೇ?

ಆ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಅನಂತ್‌ನಾಗ್ (ಬೆಂಗಳೂರು ಅಭಿವೃದ್ಧಿ ರಾಜ್ಯ ಸಚಿವರು):

ಅ) ಹೌದು.

ಆ) 98ರ ಮಾರ್ಚ್ 25ರಂದು ಶಂಕುಸ್ಥಾಪನೆ ಮಾಡಲಾಗಿದೆ.
ಅವಧಿ: 28 ತಿಂಗಳುಗಳು
ಮೊತ್ತ: ರೂ. 18 ಕೋಟಿಗಳು.

ವಿಷಯ: ವಿದ್ಯುತ್ ಮಂಡಳಿಗೆ ಬಾಕಿ ಬರಬೇಕಾದ ಹಣ.

910 (1255)

ಶ್ರೀ ಸಿ.ಆರ್.ಸಗೀರ್ ಅಹಮದ್ (ಚಿಕ್ಕಮಗಳೂರು): ಮಾನ್ಯ ಇಂಧನ ರಾಜ್ಯ

ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕರ್ನಾಟಕ ವಿದ್ಯುತ್ ಮಂಡಳಿಗೆ ಮಹಾನಗರ ಪಾಲಿಕೆ ಪುರಸಭೆ, ನಗರಸಭೆ ಹಾಗೂ ಗ್ರಾಮಪಂಚಾಯ್ತಿಗಳಿಂದ ಬರಬೇಕಾದಂತಹ ಬಾಕಿ ಹಣವೆಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಈ ಸಂಸ್ಥೆಗಳಿಂದ ಹಣ ಬಾಕಿ ಉಳಿಯಲು ಕಾರಣವೇನು?

ಇ) ಈ ಸಂಸ್ಥೆಗಳಿಂದ ಬಾಕಿ ಇರುವ ಹಣವನ್ನು ವಸೂಲು ಮಾಡಲು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಕೈಗೊಂಡಿರುವ ಕ್ರಮಗಳೇನು.

ಈ) ವಿದ್ಯುತ್ ಮಂಡಳಿಗೆ ಈ ಸಂಸ್ಥೆಗಳಿಂದ ಬಾಕಿ ಇರುವ ಹಣ ಮನ್ನಾಮಾಡಲು ಸರ್ಕಾರದವರು ಪರಿಶೀಲಿಸುವರೇ?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು):

ಅ) ರಾಜ್ಯದಲ್ಲಿ ಕರ್ನಾಟಕ ವಿದ್ಯುತ್ ಮಂಡಳಿಗೆ ಮಹಾನಗರಪಾಲಿಕೆ, ಪುರಸಭೆ, ನಗರ ಸಭೆ ಹಾಗೂ ಗ್ರಾಮ ಪಂಚಾಯ್ತಿಗಳಿಂದ 31-12-97ರ ಅಂತ್ಯದಲ್ಲಿರುವಂತೆ ಬರಬೇಕಾಗಿದ್ದ ಬಾಕಿ ಹಣದ ಒಟ್ಟು ಮೊತ್ತ 12368.78 ಲಕ್ಷ ರೂ. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) ತಿಂಗಳ ವಿದ್ಯುತ್ ಬಿಲ್ಲನ್ನು ನಿಗದಿತ ಸಮಯದಲ್ಲಿ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಪಾವತಿ ಮಾಡದೇ ಇರುವುದರಿಂದ ಹಾಗೂ ಸರ್ಕಾರವು ಈ ಸಂಸ್ಥೆಗಳಿಗೆ ನೀಡುವ ಅನುದಾನದಲ್ಲಿ ಸಮಯ-ಸಮಯಕ್ಕೆ ವಿದ್ಯುತ್ ಬಾಕಿ ಕಡಿತ ಮಾಡದೇ, ಕರ್ನಾಟಕ ವಿದ್ಯುತ್ ಮಂಡಳಿಗೆ ಹೊಂದಾಣಿಕೆಯ ಮೂಲಕ ಸಂದಾಯ ಮಾಡದೇ ಇರುವುದು, ಬಾಕಿ ಉಳಿಯಲು ಮುಖ್ಯ ಕಾರಣಗಳಾಗಿವೆ.

ಇ) ಮಂಡಳಿಯು ಸರ್ಕಾರದ ಉನ್ನತ ಮಟ್ಟದಲ್ಲಿ ಹಾಗೂ ಮಂಡಳಿಯ ಅಧಿಕಾರಿಗಳು ತಮ್ಮ ತಮ್ಮ ವ್ಯಾಪ್ತಿಯಲ್ಲಿ ಸಂಬಂಧಿತ ಸಂಸ್ಥೆಗಳನ್ನು ಬಾಕಿ ಪಾವತಿಗಾಗಿ ಒತ್ತಾಯಿಸುತ್ತಿದ್ದು, ಈ ವಿಷಯ ಕುರಿತು ಸರ್ಕಾರದ ವಿವಿಧ ಮಟ್ಟದ ಸಭೆಗಳಲ್ಲೂ ಸಹ ಗಮನ ಸೆಳೆಯಲಾಗುತ್ತಿದೆ. ಈ ಸಂಸ್ಥೆಗಳಿಗೆ ಸಂಬಂಧಿಸಿದ ಕುಡಿಯುವ ನೀರು ಸರಬರಾಜು ಹಾಗೂ ಬೀದಿ ದೀಪಗಳ ಸ್ಥಾವರಗಳು ಸಾರ್ವಜನಿಕ ಸೇವೆಗೆ ಸಂಬಂಧಿಸಿದವುಗಳಾದುದರಿಂದ ಸಾರ್ವಜನಿಕ ಹಿತದೃಷ್ಟಿಯಿಂದ ವಿದ್ಯುತ್ ಸರಬರಾಜನ್ನು ಕಡಿತಗೊಳಿಸುವಂತಹ ಕಠಿಣ ಕ್ರಮವನ್ನು ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ.

ಈ) ಮಂಡಳಿಯು ಎದುರಿಸುತ್ತಿರುವ ಕಠಿಣ ಆರ್ಥಿಕ ಪರಿಸ್ಥಿತಿಯಲ್ಲಿ ಬಾಕಿ ಹಣವನ್ನು ಮನ್ನಾ ಮಾಡುವುದು ಕಷ್ಟಕರ.

ವಿಧಾನ ಸಭಾ ಸದಸ್ಯರಾದ ಶ್ರೀ ಸಿ.ಆರ್.ಸಗೀರ್ ಅಹಮದ್ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1255ಕ್ಕೆ ಅನುಬಂಧ.

ಜಿಲ್ಲಾವಾರು ನಗರ ಸಭೆ: ಪುರಸಭೆ: ಮಹಾನಗರ ಪಾಲಿಕೆಗಳ ಮತ್ತು ಗ್ರಾಮ ಪಂಚಾಯಿತಿಗಳ ಬಾಕಿ 31-12-1997ರಲ್ಲಿದ್ದಂತೆ. (ರೂ.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಪುರಸಭೆ ನಗರ ಸಭೆ ಬಾಕಿ | ಮಹಾನಗರ ಪಾಲಿಕೆಗಳ ಬಾಕಿ | ಗ್ರಾಮ ಪಂಚಾಯಿಯಿತಿಗಳ ಬಾಕಿ | ಮೊತ್ತ |
|---|---|---|---|---|---|
| 1) | ಬೆಂಗಳೂರು ನಗರ | 130.62 | 181.14 | 166.69 | 478.45 |
| 2) | ಬೆಂಗಳೂರು ಗ್ರಾಮಾಂತರ | 190.49 | -- | 713.22 | 903.71 |
| 3) | ತುಮಕೂರು | 288.66 | - | 328.00 | 616.66 |
| 4) | ಕೋಲಾರ | 395.07 | - | 423.52 | 818.59 |
| 5) | ದಕ್ಷಿಣ ಕನ್ನಡ | 176.11 | 123.80 | 36.42 | 336.33 |
| 6) | ಶಿವಮೊಗ್ಗ | 560.08 | - | 160.86 | 720.94 |
| 7) | ಚಿಕ್ಕಮಗಳೂರು | 92.11 | - | 75.86 | 167.97 |
| 8) | ಮೈಸೂರು | 195.82 | 382.74 | 432.21 | 1010.77 |
| 9) | ಮಂಡ್ಯ | 299.46 | - | 205.51 | 504.97 |
| 10) | ಕೊಡಗು | 78.94 | - | 32.43 | 111.37 |
| 11) | ಹಾಸನ | 353.46 | - | 318.02 | 671.48 |
| 12) | ಧಾರವಾಡ | 205.86 | 0.45 | 516.07 | 722.38 |
| 13) | ಉತ್ತರ ಕನ್ನಡ | 119.24 | -- | 83.39 | 202.63 |
| 14) | ಚಿತ್ರದುರ್ಗ | 1048.63 | - | 408.31 | 1456.94 |

| | | | | |
|---|---|---|---|---|
| 15) ಬೆಳಗಾಂ | 119.45 | 83.16 | 227.14 | 429.75 |
| 16) ಬಿಜಾಪುರ | 232.33 | - | 245.68 | 478.01 |
| 17) ಗುಲ್ಬರ್ಗಾ | 129.48 | 67.76 | 578.19 | 775.43 |
| 18) ಬೀದರ್ | 362.65 | - | 337.59 | 700.24 |
| 19) ರಾಯಚೂರು | 325.82 | - | 441.71 | 767.53 |
| 20) ಬಳ್ಳಾರಿ | 115.38 | - | 379.23 | 494.61 |
| ಒಟ್ಟು | 5419.66 | 839.05 | 6110.05 | 12368.78 |